ಹಿಂದಿನ ಸೀಟಿನಲ್ಲಿ ಕೂತಿದ್ದ ನನ್ನ ಸಹಪಾಠಿಯೊಬ್ಬ, ಗೋಪಾಲನ್ ಅವರ ಮಾತನ್ನು ತುಂಡರಿಸುತ್ತ, ತಟ್ಟನೆ ಅವರಿಗೊಂದು ಪ್ರಶ್ನೆಯ ಬಾಣ ಎಸೆದ – 'ಇವೆಲ್ಲ ತುಂಬ ಸ್ವಾರಸ್ಯಕರವಾಗಿದೆ ಗೋಪಾಲನ್ ಸರ್, ಆದರೆ, ಕಡೆಗೂ ಆ ಮನುಷ್ಯರ ಮೇಲೆ ದೆಯ್ಯಗಳು ಬರುವುದು ಸುಳ್ಳಲ್ಲವಾ?'

ಈ ಮಾತು ಕೇಳಿದ್ದೇ ಕರೆಂಟು ಹೊಡೆದಷ್ಟೇ ಚುರುಕಾಗಿ ಗೋಪಾಲನ್ ಬ್ರೇಕ್ ಹಾಕಿದರು; ಕಾರನ್ನು ರಸ್ತೆ ಬದಿಗೆ ಜರುಗಿಸಿ ಸ್ವಿಚಾಫ್ ಮಾಡಿಬಿಟ್ಟರು. ನಾವು ಗಡಬಡಿಸಿ ಎದ್ದು ಕೂತು ಅವರನ್ನು ನೋಡಿದರೆ, ಅವರ ಮಾತು ಬಂದಾಗಿತ್ತು; ಅವರ ಮುಖದಲ್ಲಿ ನರಗಳು ಉಬ್ಬಿ ನಿಂತಿದ್ದವು. ಯಾವುದೋ ಬಗೆಯ ಅಸಹನೆಯೂ ಮತ್ತು ನಮಗೆ ಅರ್ಥ ಮಾಡಿಸಲೇಬೇಕೆಂಬ ಹಟವೂ ಅವರ ಮನಸ್ಸಿನೊಳಗೆ ಒಟ್ಟೊಟ್ಟಿಗೇ ಏಳತೊಡಗಿದ್ದು ನನಗೆ ಕಾಣಿಸಿತು. ಮೌನವಾಗಿಯೇ ತಮ್ಮ ಸೀಟಿನಿಂದ ನಮ್ಮತ್ತ ತಿರುಗಿ ಕೂತ ಗೋಪಾಲನ್ ಮಂದ್ರ ಸ್ವರದಲ್ಲಿ ಗುನುಗುತ್ತಿದ್ದರು – 'ಸುಳ್ಳು... ಸುಳ್ಳು...' ಕೆಲ ಕ್ಷಣಗಳ ಬಳಿಕ ಅವರ ಮಾತು ಆರಂಭವಾಯಿತು – 'ಸುಳ್ಳು... ಹಾಗಂದರೇನು ಅಂತ ನಿಮಗೆ ಸರಿಯಾಗಿ ಗೊತ್ತುಂಟ?'

ಇದೇನೋ ಮಾತುಕತೆ ಹಾದಿ ತಪ್ಪಿತೆಂದು ಗಾಬರಿಯಾದ ನಮ್ಮೆಲ್ಲರ ಕಣ್ಣು ಈಗ ಆ ಪ್ರಶ್ನೆ ಕೇಳಿದ ಗೆಳೆಯನ ಮುಖದ ಕಡೆಗೆ ತಿರುಗಿತ್ತು. ಆತ ಊಹಿಸಲಾಗದ ಈ ಬೆಳವಣಿಗೆಯಿಂದ ತುಸು ಪೆಚ್ಚಾಗಿದ್ದ; ತನ್ನದೇನೂ ತಪ್ಪಿಲ್ಲವೆಂಬಂತೆ ನಮ್ಮೆಡೆ ನೋಡುತ್ತಿದ್ದ. ಪ್ರಾಯಶಃ ಆತ ಈ ಪ್ರಶ್ನೆ ಒಗೆದಿದ್ದು ಗೋಪಾಲನ್ ಅವರ ಏಕತಾನತೆಯ ಮಾತುಗಳಿಂದ ಕ್ಷಣಕಾಲ ಬಿಡುವು ಪಡೆಯಲಿಕ್ಕೂ ಇದ್ದೀತು; ಅಥವಾ, ನಗರೀಕೃತ ಮೇಲುಮಧ್ಯಮವರ್ಗದ ಕುಟುಂಬವೊಂದರಲ್ಲಿ ಬೆಳೆದ ಮನಸ್ಸಿನ ಕಾಮನ್‌ಸೆನ್ಸಿನಿಂದ ಲೋಕಾಭಿರಾಮವಾಗಿ ಆ ಪ್ರಶ್ನೆ ಹುಟ್ಟಿದ್ದಿರಬಹುದು. ಆದರೆ, ಪರಿಣಾಮ ಮಾತ್ರ ಪ್ರತಿಕೂಲವಾಗಿದ್ದಕ್ಕೆ ನಾವೆಲ್ಲ ಗಾಬರಿಯಾದೆವು.

ಹೀಗೆ ಒಮ್ಮೆಲೇ ಬಿಗಿಯಾದ ವಾತಾವರಣವನ್ನು ಮತ್ತೆ ಗೋಪಾಲನ್ ಅವರೇ ಹಗುರಗೊಳಿಸಿದರು – 'ಇನ್ ಫ್ಯಾಕ್ಟ್, ನೀನು ಬಹಳ ಒಳ್ಳೆಯ ಪ್ರಶ್ನೆಯನ್ನೇ ಕೇಳಿದ್ದೀಯ; ಮತ್ತು ನಾನು ಅದಕ್ಕೆ ಪೂರ್ಣ ಉತ್ತರ ಹೇಳುವವರೆಗೆ ಈ ಕಾರು ಮುಂದೆ ಓಡುವುದಿಲ್ಲ!' ಎಂದು ಚಾವಿಯನ್ನು ಕಿತ್ತು ಜೇಬಿಗೆ ಇಳಿಸಿದರು. ಮುಂದೆ, ನಡೆದದ್ದು ಅನಿರ್ವಚನೀಯವಾದ ಒಂದು ವಾಗ್ವಿಲಾಸ; ಅಷ್ಟು ಪ್ರಖರವೂ ಸಂದರ್ಭಸ್ಪಂದಿಯೂ ಆಗಿದ್ದ ಮಾತುಗಾರಿಕೆಯನ್ನು ಇಲ್ಲಿಯವರೆಗೆ ನಾನು ಯಾವ ತಾಳಮದ್ದಲೆಯಲ್ಲೂ ಕೇಳಿಲ್ಲ.

'ಸುಳ್ಳು – ಈ ಶಬ್ದವನ್ನು ನಾವು ಬಹಳ ಎಚ್ಚರಿಕೆಯಿಂದ ಉಪಯೋಗಿಸಬೇಕು. ಈ ಲೋಕದಲ್ಲಿ ನಮಗೆ ಅರ್ಥವಾಗದೆ ಇರುವುದೆಲ್ಲ ಸುಳ್ಳೆ? ಕಾಣದೆ ಇರುವುದೆಲ್ಲ ಅವಾಸ್ತವವೆ? ಒಮ್ಮೆ ಹಾಗಾಗಿದ್ದರೆ, ಈ ಲೋಕದಲ್ಲಿ ಯಾವ ನಿಜವನ್ನೂ ನಮಗೆ ಕಾಣಲಿಕ್ಕೆ ಸಾಧ್ಯವಿರಲಿಲ್ಲ. ತೆಯ್ಯಮ್ ಪಾತ್ರಗಳು ನಿಜವಾದ ದೆಯ್ಯಗಳಲ್ಲ ಅನ್ನುವುದೇನೋ ನಿಜವಿರಬಹುದು; ಆದರೆ ಹಾಗೆ ಮೈಮೇಲೆ ಬರುವುದು ಸುಳ್ಳು ಅನ್ನುವ ನಿಮ್ಮ ಮಾತೇನಿದೆ... ಅದು... ಅದು... ಆ ಪಾತ್ರಿಯ ಮೇಲೆ ನೀವು ಹೊರಿಸುತ್ತಿರುವ ಒಂದು ಗಂಭೀರ ಆಪಾದನೆ... ದೆಯ್ಯ ಬರದಿದ್ದರೂ ಆತ ಹಾಗೆ ನಟಿಸುತ್ತಾನೆ; ಅದನ್ನು ಜನ ನಂಬುತ್ತಾರೆ, ಅಂತಲ್ಲವಾ ನಿಮ್ಮ ಆರೋಪ?'

ಹೀಗೆ ನಮ್ಮ ಪಕ್ಷವನ್ನು ತಾವೇ ಸಿದ್ಧಪಡಿಸಿಕೊಂಡು, ಬಳಿಕ ಗೋಪಾಲನ್ ತಮ್ಮ ಪ್ರತಿಪಕ್ಷವನ್ನು ಬಿಚ್ಚಿದರು – 'ಅದು ನಿಜವೇ ಆಗಿದ್ದರೆ, ಈ ಆಚರಣೆಯಾದರೂ ಯಾಕೆ ಉಳಿಯುತ್ತಿತ್ತು? ಹಲವು ಶತಮಾನಗಳಿಂದ – ಅಥವಾ ಸಹಸ್ರಮಾನಗಳಿಂದಲೂ ಇರಬಹುದು – ಇಂಥ ಪಾತ್ರಿಗಳು ತೋರಿಸುತ್ತ ಬಂದ ಈ ಆವಾಹನೆಯು ಪೂರಾ ಕಣ್ಕಟ್ಟೇ ಆಗಿದ್ದರೆ, ವರ್ಷವರ್ಷವೂ ಈ ಊರಿನ ಸಹಸ್ರಾರು ಜನ ಅದನ್ನು ಬಂದು ನೋಡುತ್ತಿದ್ದರೇನು? ನಮ್ಮೂರಿನ ಜನ ಅಷ್ಟು ಮೂರ್ಖರು ಅಂತ